## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 1823 ಃ 2015**

ಪಿಡಬ್ಲೂ ಃ 1
ಸಿಡಬ್ಲೂ ಃ 1

| | |
|---|---|
| ಸಾಕ್ಷಿಯ ಹೆಸರು | ಃ ಅಭಿನಂದನ |
| ತಂದೆಯ ಹೆಸರು | ಃ ಅನಂತ ಚೋಗಲಾ |
| ವಯಸ್ಸು | ಃ 39 ವರ್ಷ |
| ಉದ್ಯೋಗ | ಃ ಅಕೌಂಟಂಟ್, ರಾಮಹುಂಡೈ ಶೂರೂಮ |
| ವಾಸ ಸ್ಥಳ | ಃ ಹುಬ್ಬಳ್ಳಿ |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಃಕರಿಸಿದ ದಿನಾಂಕಃ 05–11-2015

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ

ಚಾಸಾ–8 ನಮ್ಮ ಕಂಪನಿ ಇಂಜನಿಯರಾಗಿದ್ದು ಅವರ ಪರಿಚಯವಿರುತ್ತದೆ. ಅವರು ಈ ಹೈದರಾಬಾದನಲ್ಲಿ ಇರುತ್ತಾರೆ.

2. ದಿನಾಂಕಃ 28–08–2014 ರಂದು ಚಾಸಾ–8 ನಮ್ಮ ಕಂಪನಿ ಕೆಲಸದ ನಿಮಿತ್ಯ ಹುಬ್ಬಳ್ಳಿಗೆ ಬಂದಿದ್ದು ರಾತ್ರಿ 8.30 ಗಂಟೆಗೆ ವಿಆರ್‌ಎಲ್ ಬಸ್ ಮುಖಾಂತರ ಹೈದರಾಬಾದಗೆ ಹೋಗುತ್ತಿದ್ದಾಗ ಅವರನ್ನು ಕಳುಹಿಸಲು ಖಾದರ ಎಂಬ ನಮ್ಮ ಆಫೀಸ್ ಸಿಬ್ಬಂದಿ ಹೋಗಿದ್ದರು. ಆ ಸಂದರ್ಭದಲ್ಲಿ ನಮ್ಮ ಕಂಪನಿ ಮ್ಯಾನೇಜರ ಚಾಸಾ–8 ರ ಬ್ಯಾಗ ವಿಆರ್‌ಎಲ್ ಬಸ್ ನಿಲ್ದಾಣದಲ್ಲಿ ಕಳ್ಳತನವಾಗಿದ್ದರ ಕುರಿತು ನನಗೆ ಮಾಹಿತಿ ನೀಡಿದರು. ಅದರಂತೆ ನಾನು ವಿಆರ್‌ಎಲ್ ಬಸ್ ನಿಲ್ದಾಣಕ್ಕೆ ಹೋಗಿ ನೋಡಲು ನನಗೆ ತಾನು ಬ್ಯಾಗನ್ನು ಬಸಲ್ಲಿ ಇಟ್ಟು ನೀರು ತರಲು ಕೆಳಗೆ ಇಳಿದು ಹೋಗಿ ಬರುವಷ್ಟರಲ್ಲಿ ಬ್ಯಾಗ ಕಳ್ಳತನವಾಗಿತ್ತು. ಸದರಿ ಬ್ಯಾಗಿನಲ್ಲಿ ಒಂದು ಲಕ್ಷ ರೂ ನಗದು ಹಣ, ಒಂದು ಲ್ಯಾಪಟ್ಯಾಪ ಲೆನೋವಾ ಕಂಪನಿದು, ಒಂದು ಪ್ಯಾನ ಕಾರ್ಡ, ಡಿಎಲ್ ಕಳ್ಳತನವಾಗಿದ್ದರ ಕುರಿತು ಹೇಳಿದರು. ಚಾಸಾ–8 ರ ವರಿಗೆ ತುತ್ತಾಗಿ ಕೆಲಸದ ಕಾರಣಕ್ಕೆ ಅವರು ಹೈದರಾಬಾದಗೆ ಮುಂದಿನ ಬಸ್ ಮುಖಾಂತರ ಹೋಗಿದ್ದು ನಾನು ಅವರ ಪರವಾಗಿ ಫಿರ್ಯಾದಿ ನೀಡಿದ್ದೆ . ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–1 ಅಂತಾ, ಅದರಲ್ಲಿದ್ದ ಸಹಿಯನ್ನು ನಿಶಾನೆ ಪಿ–1ಎ ಅಂತಾ ಗುರುತಿಸಲಾಯಿತು.

3. ಆ ನಂತರ ಅಂದಾಜು ಮೇ 21 ಅಥವಾ 28 2015 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಈ ಪ್ರಕರಣದ 8 ಜನ ಆರೋಪಿತರನ್ನು ತೋರಿಸಿದ್ದರು. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ–8 ಕೂಡಾ ಠಾಣೆಗೆ ಬಂದು ಆರೋಪಿತರನ್ನು ನೋಡಿದ್ದು ಆವಾಗ ನಾನು, ಚಾಸಾ–8 ಮತ್ತು ಪೊಲೀಸರು 8 ಜನ ಆರೋಪಿತರನ್ನು ವಿಚಾರಣೆ

ಮಾಡಿದ್ದೇವು. ಆ ಸಂದರ್ಭದಲ್ಲಿ ಆರೋಪಿತರು ಈ ಹಿಂದೆ ತಾವು ಚೆವರಲೆಟ ಗಾಡಿ ಮುಖಾಂತರ ತಾವು ಗುಜರಾತದಿಂದ ಹುಬ್ಬಳ್ಳಿಗೆ ಬಂದಿದ್ದು ಈದಗಾ ಮೈದಾನದಲ್ಲಿ ತಮ್ಮ ಗಾಡಿಯನ್ನು ನಿಲ್ಲಿಸಿ 4 ಹೊಂಡಾ ಬೈಕಗಳ ಮುಖಾಂತರ ಬಸವ ವನದಲ್ಲಿದ್ದ ವಿಆರ್‌ಎಲ್ ಬಸ್ ನಿಲ್ದಾಣಕ್ಕೆ ಪ್ಲಾನ ಮಾಡಿ ಬಂದು ಅವರ ಪೈಕಿ ಇಬ್ಬರು ಬಸ್ ಒಳಗೆ ಹತ್ತಿದ್ದು, ಇಬ್ಬರು ಬಸ್ ಹೊರಗೆ ನಿಂತಿದ್ದು, ಉಳಿದ 4 ಜನ ಅಲ್ಲಿಯೇ ಬೇರೆ ಕಡೆ ನಿಂತಿದ್ದು, ಚಾಸಾ–8 ಆ ಬಸನಿಂದ ಇಳಿದ ತಕ್ಷಣ ಅವರ ಇಟ್ಟ ಬ್ಯಾಗನ್ನು ತೆಗೆದುಕೊಂಡು ಎಲ್ಲರೂ ಹೊರಗೆ ಹೋಗಿ ಆ ನಂತರ ಬ್ಯಾಗನ್ನು ತೆಗೆದು ನೋಡಿ ಅದರಲ್ಲಿದ್ದ ಒಂದು ಲಕ್ಷ ರೂ ನಗದು ಹಣ ಹಾಗೂ ಲ್ಯಾಪಟಾಪನ್ನು ತೆಗೆದುಕೊಂಡು ಉಳಿದ ವಸ್ತುಗಳನ್ನು ಹಾಗೂ ಬ್ಯಾಗನ್ನು ದಾರಿಯಲ್ಲಿ ಬಿಸಾಕಿ ಹೋದ ಬಗ್ಗೆ ನಮ್ಮ ಮುಂದೆ ಮಾಹಿತಿ ನೀಡಿದರು.

4. ಕಳುವು ಮಾಡಿದ ಒಂದು ಲಕ್ಷ ರೂ ಹಣದ ಪೈಕಿ 20 ಸಾವಿರ ರೂ ಖರ್ಚಾಗಿದ್ದು ಅದರಂತೆ ಲ್ಯಾಪಟಾಪನ್ನು ಯಾರಿಗೂ ದಾರಿಯಲ್ಲಿ ಹೋಗುವವರಿಗೆ ಮಾರಾಟ ಮಾಡಿದ್ದು ಸದರಿ ಹಣವು ಕೂಡಾ ಖರ್ಚಾಗಿದ್ದ ಬಗ್ಗೆ ಹೇಳಿದ್ದು , ಉಳಿದ 80 ಸಾವಿರ ರೂ ನಗದು ಹಣ ಗುಜರಾತದಲ್ಲಿದ್ದ ಮುನ್ನಾಬಾಯಿ ಎಂಬ ಆರೋಪಿ ಮನೆಯಲ್ಲಿ ಇಟ್ಟ ಬಗ್ಗೆ ಮಾಹಿತಿ ನೀಡಿದರು.

5. ಆ ನಂತರ ದಿನಾಂಕಃ 08–06–2015 ರಂದು ಈ ಪ್ರಕರಣದ ಉಳಿದ ಆರೋಪಿತರಾದ 9 ಮತ್ತು 10 ಆರೋಪಿತರು ಕೂಡಾ ಪೊಲೀಸರು ಬಂಧಿಸಿ ಠಾಣೆಗೆ ತಂದು ನಮ್ಮನ್ನು ಕರೆಯಿಸಿ ತೋರಿಸಿದರು. ಅದರಂತೆ ಉಳಿದ 80 ಸಾವಿರ ರೂ ಹಣವನ್ನು ಕೂಡಾ ಆರೋಪಿತರಿಂದ ಪೊಲೀಸರು ಜಪ್ತುಪಡಿಸಿಕೊಂಡರು. ಸದರಿ ಜಪ್ತುಪಡಿಸಿಕೊಂಡ ನಗದು ಹಣವನ್ನು ಠಾಣೆಯಲ್ಲಿ ನೋಡಿ ಗುರುತಿಸಿದ್ದರ ಬಗ್ಗೆ ಸಾಕ್ಷಿಯು ಹೇಳಿರುತ್ತಾರೆ. ಪೊಲೀಸರು ನಮಗೆ ಮಾಹಿತಿ ನೀಡಿದ ಪ್ರಕಾರ ಆರೋಪಿತರು ಬೇರೆ ಬೇರೆ ಕಡೆಯಲ್ಲಿ ಕೂಡಾ ಕಳ್ಳತನ ಅಪರಾಧ ಎಸಗಿದ್ದರ ಬಗ್ಗೆ ಕೂಡಾ ನನಗೆ ಗೊತ್ತಾಯಿತು. ಆರೋಪಿತರು ಕೃತ್ಯಕ್ಕೆ ಬಳಸಿದ ಹೊಂಡಾ ಬೈಕಗಳನ್ನು ಹಾಗೂ ಚೆವರಲೆಟ ಗಾಡಿಯನ್ನು ಕೂಡಾ ಪೊಲೀಸರು ಠಾಣೆಯಲ್ಲಿ ತೋರಿಸಿದ್ದರು. ಅವನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿತರು ಬಳಸಿದ ಮೋಟರ ಬೈಕಗಳು ಹೊಂಡಾ ಯುನಿಕಾರ್ನ ಕಂಪನಿಯ 3 ಗಾಡಿಗಳು ಹಾಗೂ ಇನ್ನೊಂದು ಬೇರೆ ಕಂಪನಿಯದಾಗಿತ್ತು. ಸಾಕ್ಷಿಯು ವಾಹನಗಳ ಕುರಿತು 4 ಪೋಟೋಗಳನ್ನು ತೋರಿಸಲಾಗಿ

ಅವುಗಳಿಂದ ವಾಹನಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೋಗಳನ್ನು ನಿಶಾನೆ ಪಿ–2 ರಿಂದ ನಿಶಾನೆ ಪಿ–5 ಅಂತಾ ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇದ್ದ ಎಲ್ಲ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀ. ಆರ್ ಪಿ ಸಿ ವಕೀಲರಿಂದಃ

6. ನಾನು ಬಿ ಕಾಮ್ ಎಲ್ಎಲ್ಬಿಯವರೆಗೆ ಓದಿರುತ್ತೇನೆ. ಸಾಕ್ಷಿಗೆ ತನ್ನ ಎಡಗೈ ತೋರಿಸಲು ಹೇಳಿದಾಗ ಅದರಲ್ಲಿ ಆರೋಪಿತರ ಹೆಸರುಗಳು ಬರೆದುಕೊಂಡಿದ್ದು , ಆರೋಪಿತರ ಹೆಸರುಗಳು ನೆನಪು ಇರುವುದಿಲ್ಲ ಆ ಕಾರಣಕ್ಕೆ ಬರೆದುಕೊಂಡಿರುತ್ತೇನೆ ಅಂತಾ ಹೇಳಿರುತ್ತಾರೆ.

7. ಘಟನೆ ಕುರಿತು ಚಾಸಾ–8 ರ ಪೋನ್ ನನಗೆ 8ವರೆಯಿಂದ 9 ಗಂಟೆ ಒಳಗೆ ಬಂದಿತ್ತು. ಆಗ ನಾನು ಮನೆಯಲ್ಲಿದ್ದೆ . ನಮ್ಮ ಮನೆ ರೇಣುಕಾ ನಗರದಲ್ಲಿದ್ದು ಅಲ್ಲಿಂದ ಬಸವ ವನ ವಿಆರ್ಎಲ್ ಬಸ್ ನಿಲ್ದಾಣ 7 ಕಿಮಿ ಅಂತರದಲ್ಲಿದೆ ಎಂದರೆ ಸರಿ . ನಂತರ 10 ರಿಂದ 15 ನಿಮಿಷಗಳ ಸಮಯ ತೆಗೆದುಕೊಂಡು ನಾನು ಬಸವ ವನಕ್ಕೆ ಬಂದಿದ್ದೆ . ಅದರಂತೆ ಎರ್ಪೋರ್ಟನಿಂದ ಶ್ರೀ ಹೊಟೇಲವರೆಗೆ ವಾಹನದ ಸಂಚಾರ ಸಾಕಷ್ಟು ಇರುತ್ತದೆ ಎಂದರೆ ಸರಿ. ಬಸವ ವನಕ್ಕೆ ಬರಲು 9 ರಿಂದ 9 ಕಾಲ ಗಂಟೆ ಆಗಿತ್ತು.

8. ಚಾಸಾ–8 ಪ್ರಯಾಣಿಸಬೇಕಾಗಿದ್ದ ಬಸ್ ಓಲ್ಡೋ ಬಸ್ ಆಗಿತ್ತು. ಓಲ್ಡೋ ಬಸ್ ಅದು ಹುಬ್ಬಳ್ಳಿಯಿಂದ ಹೈದರಾಬಾದಗೆ ಹೋಗುವ ಬಸ್ ಆಗಿತ್ತು. ಅದರ ವೇಳೆ 8ವರೆ ಗಂಟೆಯಾಗಿತ್ತು. ಚಾಸಾ–8 ಅದೇ ಬಸ್ಗೆ ಹೋಗಿದ್ದರು ಆದರೆ ಅವರ ಬ್ಯಾಗ ಕಳುವಾಗಿದ್ದರ ಕುರಿತು ಚಾಸಾ–8 ರಿಗೆ ಗೊತ್ತಾದ ತಕ್ಷಣ ಮತ್ತೆ ಬಸ್ ನಿಲ್ದಾಣಕ್ಕೆ ವಾಪಾಸ ಬಂದು ಚೌಕಶಿ ಮಾಡಿದ ನಂತರ ಬಸ್ ಬಿಡಲಾಗಿತ್ತು.

9. ಸಾಮಾನ್ಯವಾಗಿ ಯಾವುದೇ ಪ್ರಯಾಣಿಕರು ಬಸಲ್ಲಿ ಹತ್ತಿದಾಗ ತಮ್ಮ ಸೀಟಿನಲ್ಲಿ ಇದ್ದ ಸಾಮಾನುಗಳ ಇರುವಿಕೆ ಬಗ್ಗೆ ಸೀಟ ಮೇಲೆ ಕೂಡ್ರುವ ಮೊದಲು ಗೊತ್ತಾಗುತ್ತದೆ ಎಂದರೆ ಸರಿ. ಚಾಸಾ–8 ಇವರು ಕೂಡ್ರುವ ಸೀಟಿನ ಮೇಲಿನ ಕ್ಯಾರಿಯರ್ಲ್ಲಿ ಬ್ಯಾಗ ಇಡಲಾಗಿತ್ತು. ಈ ಮೇಲೆ ಪಾಟೀ ಸವಾಲಿನಲ್ಲಿ ಹೇಳಿದ ವಿಷಯಗಳು ದೂರು ಕೊಡುವ ಸಂದರ್ಭದಲ್ಲಿ ನನ್ನ ತಿಳುವಳಿಕೆಗೆ ಇದ್ದವು ಎಂದರೆ ಸರಿ. ಆದರೆ ಅವನ್ನು ನಾನು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ .

10. ನಿಶಾನೆ ಪಿ–1ನ್ನು ನಾನು ರಾತ್ರಿ 11 ಗಂಟೆಗೆ ಪೊಲೀಸ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಅದನ್ನು ನಾನೇ ಬರೆದಿರುತ್ತೇನೆ. ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತರ ಹೆಸರುಗಳನ್ನು ನಿಖರವಾಗಿ ಹೇಳಲಾಗುವುದಿಲ್ಲ. ಆರೋಪಿತರು ಹಿಂದಿಯಲ್ಲಿ ಮಾತನಾಡುತ್ತಾರೆ. ಮತ್ತೆ ಮುಂದುವರೆದು ಗುಜರಾತಿಯಲ್ಲಿ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ದೂರು ಸಲ್ಲಿಸಿದ ನಂತರ ಪೊಲೀಸರು ನನಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಈ ಪ್ರಕರಣದಲ್ಲಿ ಪೊಲೀಸ ಠಾಣೆಗೆ ನಾನು 4–5 ಸಲ ಹೋಗಿದ್ದೆ .

11. ಚಾಸಾ–8 ನಾನು ಸ್ಥಳದಲ್ಲಿ ಹೋದ ನಂತರ 5 ನಿಮಿಷಗಳ ವರೆಗೆ ಮಾತ್ರ ನಿಂತಿದ್ದರು. ದೂರು ಬರೆಯುವಾಗ ಅಥವಾ ಬರೆದ ನಂತರ ಕೂಡಾ ಚಾಸಾ–8 ಬಸ್ಸಿನಲ್ಲಿ ತನ್ನೊಂದಿಗೆ ಯಾರ್‍ಯಾರು ಇದ್ದರು ಎಂಬ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿ . ಆರೋಪಿತರಿಂದ ಜಪ್ತುಪಡಿಸಿಕೊಂಡ 80 ರೂ ಹಣ 500 ರೂ ಹಾಗೂ 1000 ರೂ ನೋಟಗಳಿದ್ದು ಅವು ಎಷ್ಟೆಷ್ಟು ಬಂಡಲಗಳು ಇದ್ದವು ಎಂಬ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ. ಆರೋಪಿತರ ಹೆಸರು ವಿಳಾಸಗಳನ್ನು ಹೇಳಲಾಗುವುದಿಲ್ಲ.

12. ಅದರಂತೆ ಚಾಸಾ–8 ನನ್ನೊಂದಿಗೆ ಎರಡು ಸಲ ಠಾಣೆಗೆ ಬಂದಿರುತ್ತಾರೆ. ಇವತ್ತೇ ಪೊಲೀಸರು ಆರೋಪಿತರನ್ನು ನನಗೆ ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೊಲೀಸ ಠಾಣೆಯಲ್ಲಿ ಕೂಡಾ ನೋಡಿದ್ದೆ ಅಂತಾ ಹೇಳುತ್ತಾರೆ. ನಾನೇನು ವಿಆರ್‌ಎಲ್ ಬಸ್ ನಿಲ್ದಾಣದಲ್ಲಿ ಅಳವಡಿಸಿದ ಸಿಸಿ ಕ್ಯಾಮರಾದಲ್ಲಿ ಘಟನೆ ದಿನಾಂಕದ ದೃಶ್ಯವನ್ನು ನೋಡಿರುವುದಿಲ್ಲ. ಪೊಲೀಸ ಠಾಣೆಯಲ್ಲಿ ಆರೋಪಿತರೊಂದಿಗೆ ವೈಯಕ್ತಿಕವಾಗಿ ಮಾತನಾಡುವ ಯಾವುದೇ ಪ್ರಸಂಗ ಬಂದಿರಲಿಲ್ಲ ಎಂದರೆ ಸರಿ. ಪೊಲೀಸರು ಆರೋಪಿತರು ಕೃತ್ಯಕ್ಕೆ ಬಳಸಿದ ವಾಹನಗಳನ್ನು ತೋರಿಸಿದ್ದು ಅವುಗಳ ಕುರಿತು ಒಂದು ವಾಹನದ ನಂಬರ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ದೂರು ಸಲ್ಲಿಸುವ ಸಂದರ್ಭದಲ್ಲಿ ಚಾಸಾ–8 ನೀಡಿದ ಮಾಹಿತಿಯನ್ನು ಹೊರತುಪಡಿಸಿ ಉಳಿದ ಮಾಹಿತಿಯನ್ನು ಪೊಲೀಸರೇ ನೀಡಿರುತ್ತಾರೆ ಎಂದರೆ ಸರಿಯಲ್ಲ.

13. ಆರೋಪಿತರ ಕುರಿತು ಮಾಹಿತಿಯನ್ನು ದಿನಾಂಕ: 21–05–2015 ರಂದು ಕೇಳಿ ತಿಳಿದುಕೊಂಡಿದ್ದೇವೆ. ಆರೋಪಿತರಿಂದ ಜಪ್ತುಪಡಿಸಿಕೊಂಡೆವು ಎಂದು ಹೇಳಲಾದ 80 ಸಾವಿರ ರೂ ಹಣವನ್ನು ಅದಕ್ಕೂ ಮೊದಲು ನಾನು ನಿಖರವಾಗಿ ನೋಡಿರಲಿಲ್ಲ ಎಂದರೆ ಸರಿ.

14. ಘಟನೆ ದಿನಾಂಕದಂದು ಚಾಸಾ–8 ತಾನು ಬ್ಯಾಗನ್ನು ಬಸ್‌ನಲ್ಲಿ ಇಟ್ಟು ನೀರು ತರಲು ಕೆಳಗೆ ಹೋದಾಗ ತನ್ನ ಬ್ಯಾಗ ಕಳುವಾದ ಬಗ್ಗೆ ಹಾಗೂ ಬ್ಯಾಗಿನಲ್ಲಿ 1 ಲಕ್ಷ ರೂ ನಗದು ಹಣ, ಲ್ಯಾಪಟಾಪ, ಪೆನಡ್ರೈವ್, ಪ್ಯಾನಕಾರ್ಡ ಇದ್ದ ಬಗ್ಗೆ ಹೇಳಿದ್ದರು. ಉಳಿದ ವಿಷಯವನ್ನೆಲ್ಲಾ ನಾನು ಪೊಲೀಸರು ನೀಡಿದ ಮಾಹಿತಿಯನ್ನು ಆಧರಿಸಿ ನಾನು ಸಾಕ್ಷ್ಯ ಹೇಳುತ್ತಿರುವೆ ಎಂದರೆ ಸರಿಯಲ್ಲ.

15. ಚಾಸಾ–8 ರ ಬ್ಯಾಗ ಕಳ್ಳತನವಾದ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅದರಂತೆ ಕಳುವಾದ ನಂತರ ಸದರಿ ಬಸ್ ನಿಲ್ದಾಣಕ್ಕೆ ವಾಪಾಸ ಬಂದು ಸಿಸಿ ಟಿವಿಯಲ್ಲಿ ಚೌಕಶಿ ಮಾಡಲಾಗಿತ್ತು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ವಿಷಯ ನನಗೆ ನಮ್ಮ ಸಿಬ್ಬಂದಿಯವರಾದ ಖಾದರ ಎಂಬುವರಿಂದ ಗೊತ್ತಾಗಿತ್ತು ಎಂದರೆ ಸರಿ. ಆದರೂ ಕೂಡಾ ನಾನು ಪೊಲೀಸರ ಮಾತನ್ನು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.